ದೂರವಾಣಿ ಸಂಖ್ಯೆ 2419700/2419567
ಫ್ಯಾಕ್ಸ್: 0821-2419363/2419301

e-mail : pmeb@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ: 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

(Re-accredited by NAAC at "A" Grade)
(overall Ranking 71st and Universities 44th in NIRF Ranking 2023)

ಸಂಖ್ಯೆ: ಪಿ.ಎಂ.ಇ.ಬಿ.-5/Spl.-31/2022-23

ದಿನಾಂಕ: 02.01.2024

ಇವರಿಗೆ;

ಅಧ್ಯಯನ ಮಂಡಳಿಯ ಅಧ್ಯಕ್ಷರು/ಸದಸ್ಯರುಗಳು
Specialized Programme
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮಾನ್ಯರೆ,

ವಿಷಯ: ಅಧ್ಯಯನ ಮಂಡಳಿಯ ವಾರ್ಷಿಕ ಸಭೆಯನ್ನು ಏರ್ಪಡಿಸುವ ಬಗೆಗೆ

* * * * *

ಮೈಸೂರು ವಿಶ್ವವಿದ್ಯಾನಿಲಯದ Specialized Programme ಅಡಿಯಲ್ಲಿ ರಚಿತವಾಗಿರುವ ಅಧ್ಯಯನ ಮಂಡಳಿಗಳು ವಾರ್ಷಿಕ ಸಭೆಗಳನ್ನು ದಿನಾಂಕ **30.01.2024**ರೊಳಗೆ ಏರ್ಪಡಿಸಿ, Specialized Programmeನಡಿ ಮಾನ್ಯತೆ ಪಡೆದ ಕೋರ್ಸ್‌ಗಳ ಪಠ್ಯಕ್ರಮಗಳಿಗೆ ಸಂಬಂಧಿಸಿದಂತೆ ತಮ್ಮ ಶಿಫಾರಸ್ಸುಗಳಿದ್ದಲ್ಲಿ, ಸದರಿ ಶಿಫಾರಸ್ಸುಗಳನ್ನು ಸಭೆಯ ನಡಾವಳಿ ಪತ್ರದೊಂದಿಗೆ ಈ ಕಛೇರಿಗೆ (ಪಿ.ಎಂ.ಇ.ಬಿ.) ಜರೂರಾಗಿ ಮುಂದಿನ ಕ್ರಮಕ್ಕಾಗಿ ಸಲ್ಲಿಸುವಂತೆ ತಿಳಿಸಲಾಗಿದೆ.

**ವಾರ್ಷಿಕ ಸಭೆಯಲ್ಲಿ ಪಾಲಿಸಬೇಕಾದ ನಿಯಮಗಳು:**

1. ಯು.ಜಿ.ಸಿ. ಮಾರ್ಗಸೂಚಿಯನ್ವಯ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬೋಧಿಸಲ್ಪಡುತ್ತಿರುವ ಎಲ್ಲಾ ವಿಷಯಗಳ ಪಠ್ಯಕ್ರಮವನ್ನು ಪ್ರತಿ 03 ವರ್ಷಗಳಿಗೊಮ್ಮೆ ಪರಿಷ್ಕರಿಸುವುದು.
2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 59(2)ರನ್ವಯ ಯಾವುದೇ ಹೊಸ ಕೋರ್ಸ್‌ಗಳು/ಡಿಪ್ಲೊಮೊಗಳನ್ನು ಪ್ರಾರಂಭಿಸುವ ಮುನ್ನ ಸಂಬಂಧಪಟ್ಟ ಪ್ರಾಧಿಕಾರಗಳಿಂದ (ಉದಾ: NCTE, ICAR ಮುಂತಾದವು) ಅನುಮತಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕಾಗಿರುತ್ತದೆ. ಈ ಅಂಶವನ್ನು ಗಮನಿಸುವುದು.
3. 2024-25ನೇ ಸಾಲಿನಿಂದ ಜಾರಿಗೊಳಿಸಬೇಕಾದ ಪಠ್ಯಕ್ರಮಗಳ ಬದಲಾವಣೆಗಳು ಏನಾದರೂ ಇದ್ದಲ್ಲಿ.
4. 2024-25ನೇ ಸಾಲಿನಿಂದ ಜಾರಿಗೊಳಿಸಬೇಕಾದ ಸ್ನಾತಕೋತ್ತರ/ಸ್ನಾತಕ ಪದವಿ/ ಡಿಪ್ಲೊಮೊ/ ಸರ್ಟಿಫಿಕೇಟ್ ಇತ್ಯಾದಿ ಹೊಸ ಶಿಕ್ಷಣಗಳ ಬಗ್ಗೆ ಶಿಫಾರಸ್ಸು ಇದ್ದಲ್ಲಿ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರುರವರು ಕಾಲಕಾಲಕ್ಕೆ ಪಠ್ಯಕ್ರಮಗಳಿಗೆ ಸಂಬಂಧಿಸಿದಂತೆ ನೀಡುವ ನಿರ್ದೇಶನದಂತೆ ಕ್ರಮವಹಿಸುವುದು.
5. ಸಭೆಯ ಸೂಚಿಪತ್ರ ಮತ್ತು ಕಾರ್ಯಸೂಚಿ (Meeting Notice and Agenda) ಇತ್ಯಾದಿಗಳನ್ನು ಸಂಬಂಧಪಟ್ಟವರಿಗೆ Certificate of Posting/Courier ಮುಖಾಂತರ ಕಳುಹಿಸಿ, ಅಗತ್ಯ ಸ್ವೀಕೃತಿ ಪಡೆಯುವುದು. ಸಭೆಯ ಸೂಚಿಪತ್ರ ಮತ್ತು ಕಾರ್ಯಸೂಚಿಯ ಒಂದು ಪ್ರತಿಯನ್ನು ಈ ಕಛೇರಿಗೆ ಮಾಹಿತಿಗಾಗಿ ಕಳುಹಿಸಬಹುದಾಗಿದೆ.
6. ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಒಳಗೊಂಡಂತೆ ದಾಖಲಿಸಿದ ನಡಾವಳಿಯನ್ನು ಸಿದ್ಧಪಡಿಸಿ, ಸಭೆಯಲ್ಲಿ ಹಾಜರಿರುವ ಎಲ್ಲಾ ಸದಸ್ಯರ ಸಹಿ ಪಡೆಯಬೇಕು. ಸಭೆಯಲ್ಲಿ ಹಾಜರಿದ್ದ ಮತ್ತು ಹಾಜರಿಲ್ಲದ ಸದಸ್ಯರ ಹೆಸರುಗಳನ್ನು ನಡವಳಿಯಲ್ಲಿ ದಾಖಲಿಸಬೇಕು.

ಮು.ತಿ.ನೋ.

TO: Ms. Kavya

7. ಶೈಕ್ಷಣಿಕ ಸಾಲಿನಲ್ಲಿ ನಡೆಯುವ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸಿದ್ಧಪಡಿಸಲಾದ ಪರೀಕ್ಷಕರ ಪಟ್ಟಿಯನ್ನು (Panel of Examiners)ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಮೊಹರಾದ ಲಕೋಟೆಯಲ್ಲಿ ನೇರವಾಗಿ ಸಲ್ಲಿಸುವುದು.
8. ಅಧ್ಯಯನ ಮಂಡಳಿಗಳ ಶಿಫಾರಸ್ಸುಗಳನ್ನು ನಿಕಾಯಗಳ ಸಭೆಯ ಮುಂದೆ ಮಂಡಿಸಬೇಕಾಗಿರುವುದರಿಂದ, ಆದಷ್ಟು ಬೇಗ ನಡಾವಳಿಯನ್ನು ಕಳುಹಿಸುವುದು. ಒಂದು ವೇಳೆ ದಿನಾಂಕ 30.01.2024ರೊಳಗಾಗಿ ನಡವಳಿಯನ್ನು ಕಳುಹಿಸದಿದ್ದಲ್ಲಿ, ಸಂಬಂಧಪಟ್ಟ ಅಧ್ಯಯನ ಮಂಡಳಿಯ ಅಧ್ಯಕ್ಷರು ನೇರ ಹೊಣೆಗಾರರಾಗಿರುತ್ತಾರೆ ಮತ್ತು ಅಂತಹವರು ವಿಶ್ವವಿದ್ಯಾನಿಲಯವು ಕೈಗೊಳ್ಳಬಹುದಾದ ಕ್ರಮಕ್ಕೆ ಬದ್ಧರಾಗಿರಬೇಕಾಗಿರುತ್ತದೆ. ಆದುದರಿಂದ ಸಕಾಲದಲ್ಲಿ ನಡಾವಳಿಯನ್ನು ಕಳುಹಿಸುವ ಮೂಲಕ ತಮ್ಮೆಲ್ಲರ ಸಹಕಾರವನ್ನು ಕೋರಲಾಗಿದೆ.

**ವಿಶೇಷ ಸೂಚನೆ:**

ಎಲ್ಲಾ ಅಧ್ಯಯನ ಮಂಡಳಿಗಳ ಸಭೆಯನ್ನು ದಿನಾಂಕ 30.01.2024ರೊಳಗೆ ನಡೆಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ಸೂಚಿಸಿರುವುದರಿಂದ ಯಾವುದೇ ಕಾರಣ ನೀಡದೆ ಸಭೆಯ ನಡಾವಳಿಯನ್ನು ನಿಗದಿತ ದಿನಾಂಕದೊಳಗೆ ಕಡ್ಡಾಯವಾಗಿ ಪಿ.ಎಂ.ಇ.ಬಿ. ವಿಭಾಗಕ್ಕೆ ಸಲ್ಲಿಸಲು ಸೂಚಿಸಿದೆ.

ನಿಮ್ಮ ನಂಬುಗೆಯ

18/1/2024

ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

ಪ್ರತಿ:

1) Specialized Programme ಅಡಿಯಲ್ಲಿ ಮಾನ್ಯತೆ ಪಡೆದ ಸಂಸ್ಥೆಯ ನಿರ್ದೇಶಕರು/ಪ್ರಾಂಶುಪಾಲರುಗಳಿಗೆ.
2) ವಿಜ್ಞಾನ ಮತ್ತು ತಂತ್ರಜ್ಞಾನ, ಕಲಾ, ವಾಣಿಜ್ಯ, ಹಾಗೂ ಶಿಕ್ಷಣ ನಿಕಾಯದ ಡೀನರುಗಳಿಗೆ.
3) ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4) ಉಪಕುಲಸಚಿವರು(ಪ್ರಾಧಿಕಾರ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5) ನಿರ್ದೇಶಕರು, ಐ.ಸಿ.ಡಿ., ಗಣಕವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು – ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
6) ಮಾನ್ಯ ಕುಲಪತಿಗಳು/ಕುಲಸಚಿವರು/ಕುಲಸಚಿವ (ಪರೀಕ್ಷಾಂಗ)ರವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7) ಕಛೇರಿ ಪ್ರತಿ.